## ಉಳಿದ ಹಣ?

ಶೀಲಾ ಮತ್ತು ವಿಶು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ತಿರುವು ರಸ್ತೆಯಲ್ಲಿ ವಿಶುವಿಗೆ ಎರಡು ಸಾವಿರದ ನೋಟೊಂದು ಸಿಕ್ಕಿತು. ಅವನು ಶೀಲಾಳಿಗೆ ಕೇಳಿದ, 'ನೋಡು, ನನಗೆ ಎರಡು ಸಾವಿರದ ಒಂದು ನೋಟು ಸಿಕ್ಕಿದೆ. ನೀನೇ ಹೇಳು ಈ ಹಣವನ್ನು ಏನು ಮಾಡೋಣ?' ಅದಕ್ಕೆ ಶೀಲಾ, 'ಫಿಫ್ಟಿ ಫಿಫ್ಟಿ ಮಾಡಿಕೊಳ್ಳೋಣ...' ಎಂದಾಗ ವಿಶು ಮತ್ತೆ ಕೇಳಿದ, 'ಹಾಗಾದರೆ ಉಳಿದ ಸಾವಿರದ ಒಂಬೈನೂರು ರೂಪಾಯಿ ಏನು ಮಾಡುವುದು?'

**ತೈರೊಳ್ಳಿ ಮಂಜುನಾಥ ಉಡುಪ**






## ಶಾಲೆ ಅಂದ್ಕೊಂಡ್ವಿ...

ಜನಗಣತಿ ನಡೆದಿತ್ತು. ವಿನಾಯಕ ನಗರದ ಓಣಿಯೊಳಗಿನ ಎಲ್ಲಾ ಮನೆಗಳ ಗಣತಿ ಮುಗಿಯಿತು. ಒಂದು ಮನೆಯ ಗಣತಿಗೆ ಯಾರೂ ಹೋಗಿರಲಿಲ್ಲ. ಆ ಮನೆಯ ಯಜಮಾನ ತಹಶೀಲ್ದಾರ ಕಚೇರಿಗೆ ಹೋಗಿ ತನ್ನ ಮನೆಯ ಗಣತಿಗೆ ಯಾರೂ ಬಂದಿಲ್ಲ ಎಂದು ದೂರು ಕೊಟ್ಟ. ತಹಶೀಲ್ದಾರ ಸಂಬಂಧಿಸಿದವರನ್ನು ಕರೆಸಿ ವಿಚಾರಿಸಿದಾಗ ಕಾರ್ಯಕರ್ತ, 'ಸರ್, ಆ ಮನೆಮುಂದೆ ಸುಮಾರು ಹುಡುಗ–ಹುಡುಗಿಯರು ಗಲಾಟೆ ಮಾಡ್ತಾ ಇದ್ರು, ಅದಕ್ಕೆ ಅದು ಶಾಲೆ ಇರಬೇಕು ಅಂತ ನಾವು ಒಳಗೆ ಹೋಗಲಿಲ್ಲ' ಎಂದು ವಿವರಣೆ ನೀಡಿದ.

**ಕೆ.ಜಿ. ಭದ್ರಣ್ಣವರ**